ಪ್ರಕಟಣೆ

ಸದಸ್ಯರ ಗೈರು ಹಾಜರಾತಿಗೆ ಅನುಮತಿ ನೀಡಿಕೆ

ಅಧ್ಯಕ್ಷರು.—ವಿಧಾನಸಭಾ ಸದಸ್ಯರಾದ ಶ್ರೀ ಎಂ. ವೈ. ಘೋರ್ಪಡೆಯವರ ೧೫-೩-೯೦ ರಿಂದ ೩೧-೩-೯೦ ರ ವರೆಗೆ ವೈದ್ಯಕೀಯ ಶುಶ್ರೂಷೆ ಪಡೆಯುತ್ತಿರುವ ಕಾರಣದಿಂದ ಕರ್ನಾಟಕ ವಿಧಾನ ಸಭೆಗೆ ಗೈರು ಹಾಜರಾಗಲು ಅನುಮತಿ ಕೋರಿ ಪತ್ರ ಬರೆದಿರುತ್ತಾರೆ.

ಮೇಲೆ ಸೂಚಿಸಿದ ಅವಧಿಯಲ್ಲಿ ಮಾನ್ಯ ಸದಸ್ಯರು ಸಭೆಗೆ ಗೈರುಹಾಜರಾಗಲು ಅನುಮತಿ ಕೊಡಬೇಕೆಂದು ಸಭೆ ಅಪೇಕ್ಷಿಸುತ್ತದೆಯೇ ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.—ಶ್ರೀ ಎಂ. ವೈ. ಘೋರ್ಪಡೆಯವರಿಗೆ ಗೈರುಹಾಜರಾಗಲು ಅನುಮತಿ ನೀಡಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಅಜೀಜ್‌ಸೇಠ್(ಕಂದಾಯ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).—೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧ (ಎ) (೩)ನೇ ಕಲಮಿನ ಮೇರೆಗೆ ೧೯೮೮-೮೯ನೇ ಸಾಲುಗಳ ಮೈಸೂರು ವಿದ್ಯುತ್ ಕಾರ್ಖಾನೆಯ ೪೪ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಆ. ಶ್ರೀ ಅಜೀಜ್‌ಸೇಠ್ (ಕಂದಾಯ ಮಂತ್ರಿಗಳು).— ಅವರು ೧೯೫೬ನೇ ಇಸವಿಯ ಕರ್ನಾಟಕ ಮುದ್ರಾಂಕ ಶಾಸನದ ೯ನೇ ಕಲಮಿನ ಮೇರೆಗೆ (೧) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಪರವಾಗಿ ಮುದ್ರಾಂಕ ಶುಲ್ಕ ವಿನಾಯಿತಿಗೆ ಸಂಬಂಧಿಸಿದಂತೆ ದಿನಾಂಕ ೫-೨-೧೯೯೦ರಂದು ಹೊರಡಿಸಲಾದ ಆರ್‌ಡಿ ಕೆಎಸ್‌ಆರ್ ೮೯ನೇ ಕ್ರಮಾಂಕದ ಕಿದ್ದುಪಡಿ ಪತ್ರ ಹಾಗೂ

೨) ಬಳ್ಳಾರಿಯಲ್ಲಿರುವ ರೋಟರಿ ಅಂಗವಿಕಲರ ಧಾರ್ಮಿಕ ನ್ಯಾಸ ಪರವಾಗಿ ನೀಡಿರುವ ದಾನದ ಜಮೀನಿಗಾಗಿ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕ ಸಂದಾಯದ ವಿನಾಯಿತಿಗೆ ಸಂಬಂಧಿಸಿದಂತೆ ದಿನಾಂಕ ೫-೩-೯೦ರಂದು ಹೊರಡಿಸಲಾದ ಆರ್‌ಡಿ ೧೨೦ ಇಎಸ್‌ಆರ್ ೮೯ರ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಇ. ಶ್ರೀ ಕೆ. ಹೆಚ್. ರಂಗನಾಥ್.—(ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು) ಅವರು ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬ನೇ ಕಲಮಿನ ಮೇರೆಗೆ ೧೯೮೬-೮೭ನೇ ಸಾಲಿನ ಬೆಂಗಳೂರಿನಲ್ಲಿರುವ ಹೆಬ್ಬಾಳದ ಕರ್ನಾಟಕ ರಾಜ್ಯ ಆಗ್ರೋ-ಧಾನ್ಯ-ದವಸ ಉತ್ಪನ್ನಗಳ ನಿಯಮಿತದ ೧೫ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಈ. ಶ್ರೀ ಎಂ. ವೀರಪ್ಪಮೊಯಿಲಿ.—(ಕಾನೂನು, ಸಂಸದೀಯ ವ್ಯವಹಾರಗಳು, ಯೋಜನೆ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಮಂತ್ರಿಗಳು) ಅವರು ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧ (ಎ)ನೇ ಕಲಮಿನ ಮೇರೆಗೆ ೧೯೮೬-೮೭ನೇ ಸಾಲುಗಳ ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ ೧೪ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಕಾಗದ ಪತ್ರಗಳನ್ನು ಮುಂದಿಡಲಾಯಿತು.

ಶ್ರೀ ಆರ್. ಎನ್. ನಾಯಕ್.— ನಾನು ಇಲ್ಲಿ ನಿಂತಿದ್ದೇನೆ. ನನ್ನ ಪ್ರಶ್ನೆ ಇದೆ. ಅವಕಾಶ ಬೇಕು. ಹಿಂದೆ ಈ ರೀತಿ ಇರಲಿಲ್ಲ. ದಯವಿಟ್ಟು ನನ್ನ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಬೇಕು. ನಾನು ಇನ್ನೇ ಸಾರಿ ಈ ಸಭೆಗೆ ಬರುತ್ತಿದ್ದೇನೆ. ಒಂದು ಗಂಟೆಯಲ್ಲಿ ಯಾವತ್ತೂ ಪ್ರಶ್ನೋತ್ತರ ಮುಗಿಯುತ್ತಿರಲಿಲ್ಲ. ರೂಲ್ಸ್ ಹೇಳಿದಿರಿ, ಅದನ್ನು ನಾನು ಒಪ್ಪುತ್ತೇನೆ. ಆದರೆ ಒಬ್ಬೊಬ್ಬರಿಗೆ ಒಂದೆರಡು ಸಾರಿ ಅವಕಾಶ ಕೊಟ್ಟಿದ್ದರೆ ಇನ್ನೂ ಹೆಚ್ಚುವಾರು ಪ್ರಶ್ನೆಗಳನ್ನು ಕೇಳುವುದಕ್ಕೆ ಸಮಯ ಇರುತ್ತಿತ್ತು. ಇವತ್ತು ೧೩ ಪ್ರಶ್ನೆಗಳು ಮಾತ್ರ ಇದ್ದವು. ಮೊದಲೆಲ್ಲಾ ೨೦ ಪ್ರಶ್ನೆಗಳಿರುತ್ತಿದ್ದವು. ಈ ೧೫ ಪ್ರಶ್ನೆಗಳು ಮುಗಿಯಲಿಲ್ಲವೆಂದರೆ ಪ್ರೊಸೀಜರ್ ರಾಂಗ್ ಆಗಿದೆ ಎಂದು ತಿಳಿದುಕೊಳ್ಳಬೇಕು. ಆದ ಕಾರಣ ನನಗೆ ಈಗ ಅವಕಾಶ ಕೊಡಿ.

ಶ್ರೀ ಡಿ. ಬಿ. ಚಂದ್ರೇಗೌಡ.— ಅವರಿಗೆ ಮಧ್ಯೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರಿ ಎಂದು ನಾನು ಎದ್ದೆ.

ಅಧ್ಯಕ್ಷರು.— ನಾನು ಅವಕಾಶ ಕೊಡಲಿಲ್ಲ. ೬೦ ನಿಮಿಷಗಳ ಕಾಲ ಪ್ರಶ್ನೋತ್ತರ ವೇಳೆಗೆ ಇರುವುದು ಎಂದು ವಿಧಾನ ಸಭೆಯ ರೂಲ್ಸ್ ಮತ್ತು ಪ್ರೊಸೀಜರನ್ನು ಹೇಳಿದೆ. ಈ ಸಭೆ ಒಪ್ಪಿರತಕ್ಕ ನಿಯಮವನ್ನು ಅನ್ವಯ ಮಾಡತಕ್ಕದ್ದು ನನ್ನ ಕರ್ತವ್ಯ. ನನ್ನ ಪ್ರಶ್ನೆಯನ್ನು ಕೇಳಲೇಬೇಕು, ಅವಕಾಶ ಕೊಡಲೇಬೇಕು, ನಾನು ಸಿನೇ ಸಾರಿ ಬಂದಿದ್ದೇನೆ, ಳಿನೇ ಸಾರಿ ಬಂದಿದ್ದೇನೆ. ಈ ಚರ್ಚೆ ಎಲ್ಲಾ ಬಹಳಶಃ ಅನಗತ್ಯ ಎಂದು ಭಾವಿಸುತ್ತೇನೆ. ಈ ಸದನ ಒಪ್ಪುವುದಾದರೆ ೧೨೦ ನಿಮಿಷ ಬೇಕಾದರೆ ಪ್ರಶ್ನೋತ್ತರ ವೇಳೆಯನ್ನು ಮುಂದುವರಿಸಬಹುದು. ಅದಕ್ಕೆ ಸಭಾನಾಯಕರಿದ್ದಾರೆ, ವಿರೋಧ ಪಕ್ಷದ ನಾಯಕರಿದ್ದಾರೆ, ಸಭೆ ಇದೆ. ನೀವೆಲ್ಲ ಒಟ್ಟಾರೆ ಏನು ತೀರ್ಮಾನ ಕೊಡುತ್ತೀರೋ ಆ ತೀರ್ಮಾನವನ್ನು ಜಾರಿಗೆ ಕೊಡತಕ್ಕವನು ಮಾತ್ರ ನಾನು.

ಶ್ರೀ ಆರ್. ಎನ್. ನಾಯಕ್,— ಇದು ಹೊಸದಲ್ಲ. ಈ ಹಿಂದೆಲ್ಲ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿದ್ದರು. ಅದಕ್ಕಾಗಿ ನಾನು ಅಪೀಲ್ ಮಾಡುತ್ತಿದ್ದೇನೆಯೇ ಹೊರತು ಸಿನೇ ಸಾರಿ ಬಂದಿದ್ದೇನೆಂದು ಹೆಗ್ಗಳಿಕೆಯನ್ನು ಹೇಳಿಕೊಳ್ಳುವುದಕ್ಕೆ ಹೇಳುತ್ತಿಲ್ಲ. ತಾವು ತಿಳಿದುಕೊಳ್ಳಬೇಕು, ಹಿಂದೆಲ್ಲ ಅವಕಾಶ ಕೊಟ್ಟಿದ್ದಾರೆ. ಕಡತ ನೋಡಿದರೆ ಗೊತ್ತಾಗುತ್ತದೆ. ಹಿಂದೆಲ್ಲ ಎರಡು ತಾಸು ಪ್ರಶ್ನೋತ್ತರ ನಡೆದದ್ದೂ ಇದೆ. ಹಿಂದಿನ ಸಭಾಧ್ಯಕ್ಷರು ೩ ಸಾರಿ ಮಾತ್ರ ಒಬ್ಬರಿಗೆ ಕೇಳುವುದಕ್ಕೆ ಅವಕಾಶ ಕೊಡುತ್ತಿದ್ದರು. ಸಮಯ ನೋಡಿ ಪ್ರತಿ ಪ್ರಶ್ನೆಗೆ ಹೆಂಚಿ ಹಾಕಂತಿದ್ದರು. ೧೩ ಪ್ರಶ್ನೆಗಳಿಗೆ ನಿಮಿಷಗಳನ್ನು ಹಂಚಿ ಹಾಕಿದ್ದರೆ ನಮಗೂ ಪ್ರಶ್ನೆ ಕೇಳಲು ಅವಕಾಶ ಸಿಗುತ್ತಿತ್ತು. ತಾವು ಹಾಗೆ ಮಾಡಬಹುದಾಗಿತ್ತು.

ಅಧ್ಯಕ್ಷರು.— ತಮ್ಮ ಸೂಚನೆಯನ್ನು ಗಮನಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್.— ನನಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಿ. ಸಭಾ ನಾಯಕರು ಹೇಳಲಿ. ವಿರೋಧ ಪಕ್ಷದ ನಾಯಕರು ಹೇಳಲಿ.

ಅಧ್ಯಕ್ಷರು.— ಪ್ರಶ್ನೋತ್ತರ ಕಾಲ ಮುಗಿಯಿತು.

ಶ್ರೀ ಟಿ. ಎಂ. ಮಂಜುನಾಥ್.— ಮಾನ್ಯ ಸಭಾಧ್ಯಕ್ಷರಲ್ಲಿ ನನ್ನ ಕಳಕಳಿಯ ಪ್ರಾರ್ಥನೆ. ತಾವು ಹೇಳುವಂಥ ತೀರ್ಮಾನಕ್ಕೆ ನಾವು ಬದ್ಧರಾಗಿ ಕೆಲಸ ಮಾಡತಕ್ಕದ್ದು ನಮ್ಮ ಕರ್ತವ್ಯ. ಕೆಲವು ವಿಶೇಷವಾದ ಸಂದರ್ಭಗಳು ಬಂದಾಗ ನಾವು ಮಾತನಾಡಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅನೇಕರು ಮಾತನಾಡುವುದಕ್ಕೆ ಎದ್ದು ನಿಂತು ಬಿಡುತ್ತಾರೆ. ವಿಶೇಷವಾದ ಸಂದರ್ಭದಲ್ಲಿ ಸದಸ್ಯರನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟರೆ ಸದಸ್ಯರು ಕರ್ತವ್ಯ ಪರಿಪಾಲನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ಬಗ್ಗೆ ತಾವು ಸಹಾಯಕ್ಕೆ ಬರಬೇಕು. ಸದಸ್ಯರ ಬಗ್ಗೆ ಅನುಕಂಪ ಇಟ್ಟುಕೊಂಡು ಅವಕಾಶ ಕೊಡಿ ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.— ಇನ್ನು ಮುಂದೆ ನನ್ನ ಸಲಹೆ ಏನೆಂದರೆ ಯಾರು ಪ್ರಶ್ನೆ ಕೇಳಿದ್ದಾರೆ ಅವರಿಗೆ ಮಾತ್ರ ಅವಕಾಶ ಕೊಡಿ. ಮುಖ್ಯವಾದ ಪ್ರಶ್ನೆಗಳಿಗೆ ಮಾತ್ರ ಬೇರೆಯವರಿಗೆ ಅವಕಾಶ ಕೊಡಿ. ಹಾಗೆ ಮಾಡಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆ.

ಅಧ್ಯಕ್ಷರು.— ತಮ್ಮ ಮಾರ್ಗದರ್ಶನವನ್ನು ಇನ್ನು ಮುಂದೆ ಗಮನಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್.— ಈ ಹಿಂದೆ ನಡೆದಿದೆ. ತಾವು ದಾಖಲೆ ತೆಗೆಸಿ ನೋಡಿ. ಶ್ರೀ ಕೆ. ಎಚ್. ರಂಗನಾಥ್ ಅವರನ್ನು ತೋರಿಸಿದವರು ಅಧ್ಯಕ್ಷರಾಗಿದ್ದಾಗ ಅವಕಾಶ ಕೊಟ್ಟಿದ್ದಾರೆ.

ಅಧ್ಯಕ್ಷರು.— ಹಿಂದೆ ನಡೆದಿದ್ದಕ್ಕೆ ನಾನು ಜವಾಬ್ದಾರನಲ್ಲ. ಈಗ ನಡೆಯುತ್ತಾ ಇರುವುದಕ್ಕೆ ನಾನು ಜವಾಬ್ದಾರ.

ಶ್ರೀ ಆರ್. ಎನ್. ನಾಯಕ್.— ತಾವು ಒಂದು ಗಮನಿಸಬೇಕು. ಪ್ರಶ್ನೆ ಇರುವುದು ೧೩. ೨೦ ಪ್ರಶ್ನೆಗಳಿರುವಾಗ ಅವಕಾಶ ಕೊಡುತ್ತಾ ಇದ್ದಿರಿ. ೧೩ ಪ್ರಶ್ನೆಗಳಿಗೆ ತಾವು ನಿಮಿಷಗಳನ್ನು ಹಂಚಿ ಹಾಕಿದರೆ ಮತ್ತೆ ಅವಕಾಶ ಇರುತ್ತಿತ್ತಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ದಯಮಾಡಿ ನಾಳೆಯಿಂದ ಪ್ರಶ್ನೋತ್ತರ ವೇಳೆ ಒಂದು ಗಂಟೆ ಎಂದು ಮಾಡಿ. ಆದರೆ ಇವತ್ತು ದಯಮಾಡಿ ನನಗೆ ಅವಕಾಶ ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:— ಈಗ ಗಮನ ಸೆಳೆಯುವ ಸೂಚನೆಗಳಿವೆ.

ಶ್ರೀ ಡಿ.ಬಿ.ಚಂದ್ರೇಗೌಡ:— ನಾನು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ. ತಾವು ಅದನ್ನು ತಿರಸ್ಕರಿಸಿದ್ದೀರಿ ಎಂಬ ಪತ್ರ ಕೂಡ ನನಗೆ ಬಂದಿದೆ, ಆ ಅಧಿಕಾರ ತಮಗೆ ಇದೆ.

ಅಧ್ಯಕ್ಷರು:— ನಾನು ತಿರಸ್ಕರಿಸಿಲ್ಲ. ಅಂಗೀಕರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದೇನೆ

ಶ್ರೀ ಡಿ.ಬಿ.ಚಂದ್ರೇಗೌಡ:— ಅದರ ಅರ್ಥ ಅದೇ ಎಂದು ನಾನು ತಿಳಿದುಕೊಂಡಿದ್ದೇನೆ ಸಾಧ್ಯವಾಗದೇ ಇರುವುದಕ್ಕೆ ಕಾರಣ ಅದರೂ ಕೇಳಿ ತಿಳಿದುಕೊಳ್ಳಬೇಕಲ್ಲ,

ಅಧ್ಯಕ್ಷರೂ:— ಅದು ನನ್ನ ಛೇಂಬರ್‌ನಲ್ಲಿ.

ಶ್ರೀ ವಾಟಾಳ್ ನಾಗರಾಜ್:— ಛೇಂಬರ್‌ನಲ್ಲಿ ಗಂಟ್ಟಾಗಿ ಮಾಡುವ ವಿಷಯ ಬೇಡ.

ಅಧ್ಯಕ್ಷರು:— ಇದು ಕೌಲ್ ಅಂಡ್ ಶಕ್ದರ್ ಇದ್ದಾರಲ್ಲ ಅವರು ಬರೆತಿರತಕ್ಕದ್ದು.

ರೈತರ ಬೇಡಿಕೆಗಳ ಬಗ್ಗೆ ಪ್ರಸ್ತಾಪ ಮಾಡಲು ಅನುಮತಿ ಕೋರಿಕೆ ಮತ್ತು ಇದರ ಈಡೇರಿಕೆಗೆ ಬಿ.ಜೆ.ಪಿ. ಅಧ್ಯಕ್ಷರಿಂದ ಉಪವಾಸ ಸತ್ಯಾಗ್ರಹ

†ಶ್ರೀ ಡಿ.ಬಿ.ಚಂದ್ರೇಗೌಡ:— ತಮಗೆ ಅಧಿಕಾರ ಕೊಟ್ಟಿದ್ದಾರೆ. ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ವಸ್ತು ಸ್ಥಿತಿಯನ್ನು ತಮ್ಮ ಗಮನಕ್ಕೆ ತರಬೇಕು. ನಾವು ನಿಲುವಳಿ ಸೂಚನೆಯನ್ನು ಕಳುಹಿಸುವಾಗ ತೀರಾ ಗಂಭೀರವಲ್ಲದ ಸಮಸ್ಯೆಮೇಲೆ ಕಳುಹಿಸುವುದಿಲ್ಲ. ಈ ಸದನದ ಸದಸ್ಯರೂ ಒಂದು ರಾಷ್ಟ್ರೀಯ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರೂ ಮತ್ತು ಈ ಸದನದ ಆ ಪಕ್ಷದ ನಾಯಕರೂ ಆದ ಭಾರತೀಯ ಜನತ ಪಕ್ಷದ ಶ್ರೀಮಾನ್ ಯಡಿಯೂರಪ್ಪನವರು ಕಳೆದ ಒಂದು ವಾರದಿಂದ ವಿಧಾನ ಸೌಧದ ಮುಂದೆ ಇರತಕ್ಕ ಕಬ್ಬನ್ ಪಾರ್ಕಿನಲ್ಲಿ ಉಪವಾಸ ಕುಳಿತಿದ್ದಾರೆ. ಅವರು ಉಪವಾಸ ಕುಳಿತ್ತಿರುವುದಕ್ಕೆ ಕಾರಣ ಏನು ಎಂಬುದನ್ನು ಹೇಳಿದ್ದಾರೆ. ರಾಜ್ಯಾದ್ಯಂತ ಇರುವ ರೈತರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಅವರು ಉಪವಾಸ ಮಾಡುತ್ತಿದ್ದಾರೆ.

ಕನಿಷ್ಠ ಪಕ್ಷ ಇವತ್ತು ಸರ್ಕಾರದ ಪರವಾಗಿ ಯಾರಾದರೂ ಒಬ್ಬರೂ ಅಲ್ಲಿಗೆ ಹೋಗಿ ಅವರ ಕಷ್ಟವನ್ನು ವಿಚಾರಿಸಬೇಕಲ್ಲಿ ಸದನದಲ್ಲಿ ನಾವು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವುದು ಸರಿ ಕಾಣುವುದಿಲ್ಲ. ಮತ್ತೆ ಇದನ್ನು ಈ ಸದನದಲ್ಲಿ ಯಾವ ರೂಪದಲ್ಲಿ ಪ್ರಸ್ತಾಪ ಮಾಡಬೇಕೆಂದು ತಮ್ಮನ್ನು ಪ್ರಶ್ನಿಸಂತ್ತೇನೆ. ಇನ್ನು ಎರಡನೆಯದಾಗಿ ಈ ರಾಜ್ಯದ ರೈತರು ನಗರಪ್ರವೇಶ ಮಾಡಿದ್ದಾರೆ. ಇವತ್ತು ನಾವು ಬೆಳಿಗ್ಗೆ ವಿಧಾನಸೌಧವನ್ನು ಪ್ರವೇಶ ಮಾಡಿದ ಸಮಯದಲ್ಲಿ ಸುತ್ತಲಿನ ಬಂದೋಬಸ್ತು ನೋಡಿದೆವು. ಈ ಪೋಲೀಸ್ ಬಂದೋಬಸ್ತಿನಲ್ಲಿ ರೈತರು ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತ ಮಾಡುವುದಕ್ಕೆ ಸ್ವಾತಂತ್ರ್ಯ ಇಲ್ಲವೆಂದು ಹೇಳಿಕೊಳ್ಳೋಣವೇ ? ಹಾಗಿದ್ದರೆ ಇಂತಹ ಸದನದಲ್ಲಿ ನಿಲುವಳಿ ಸೂಚನೆ ಇಲ್ಲದೇ ಬೇರೆ ಮಾರ್ಗದಲ್ಲಿ ಹೇಗೆ ಚರ್ಚೆ ಮಾಡುವುದು ಎಂಬುದರ ಬಗ್ಗೆ ಯಾದರೂ ಯೋಚನೆ ಮಾಡಿದ್ದೀರಾ ? ಅವರು ಏಕೆ ಉಪವಾಸ ಸತ್ಯಾಗ್ರಹ ಮಾರ್ಗ ಹಿಡಿದಿದ್ದಾರೆ ಎಂಬ ಬಗ್ಗೆ ಸರ್ಕಾರ ಗಮನಹರಿಸಬೇಕು. ಒಂದು ವಾರದಿಂದ ಅವರು ಉಪವಾಸ ಮಾಡುತ್ತಿದ್ದರೂ ಏನೂ ಆಗಿಲ್ಲ ಎನ್ನುವ ರೀತಿಯಲ್ಲಿ ನಿಕೃಷ್ಟ ಸ್ಥಿತಿಗೆ ಜನತಾಂತ್ರಿಕವಾದ ಸರ್ಕಾರ ಬರಬಾರದು ಎಂದು ನನ್ನ ಭಾವನೆ. ಅದಕ್ಕಾಗಿ ನಾನು ತಮ್ಮಲ್ಲಿ ಕೇಳುತ್ತೇನೆ. ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಇವತ್ತು ಸದನ ನಡೆಯುತ್ತಿದೆ. ರಾಜ್ಯದಾದ್ಯಂತ ನೂರಕ್ಕೆ ಎಪ್ಪತ್ತು ಜನ ರೈತ ಪ್ರತಿನಿಧಿಗಳು ಬಂದಿದ್ದರೂ ಏನೂ ಆಗಿಲ್ಲ ಎನ್ನುವ ರೀತಿ ಸದನದಲ್ಲಿ ಕೈ ಕಟ್ಟಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಆ ಕಾರಣದಿಂದ ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇನ್ನು ಯಾವುದಾದರೂ ರೀತಿಯಲ್ಲಿ ಅವಕಾಶ ಕೊಡಬೇಕೆಂದು ಒತ್ತಾಯ ಮಾಡಿ ಈ ಬಗ್ಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ನಮ್ಮ ಸಹೋದ್ಯೋಗಿಗಳಾಗಿರತಕ್ಕ ಮಾನ್ಯ ಯಡಿಯೂರಪ್ಪನವರು ಕಳೆದ ಸದನದಲ್ಲೂ ಕೂಡಾ ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ಹಾಗೂ ನಾವೂ ಕೂಡಾ ಈ ವಿಚಾರವನ್ನು ಪ್ರಸ್ತಾಪ ಮಾಡಿದೆವು, ಸಾಲ ಮನ್ನಾ ಬಗ್ಗೆ, ರೈತರ ಕೆಲವು ಬೇಡಿಕೆಗಳ ಬಗ್ಗೆ ಸರ್ಕಾರದ ನಿರ್ದಿಷ್ಟ ಧೋರಣೆ ಏನು ಎನ್ನುವ ಬಗ್ಗೆ ವಿಚಾರವನ್ನು ಪದೇ ಪದೇ ಪ್ರಸ್ತಾಪ ಮಾಡಿದ್ದೇವೆ. ಆದಾದಮೇಲೆ ಮುಖ್ಯಮಂತ್ರಿಯವರು ನಿರ್ದಿಷ್ಟವಾಗಿ ಸಾಲದ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.